**ಸಾಕ್ಷಿಗೆ ದಿನಾಂಕಃ 14.10.2025 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಶ್ರೀ. ಎಂ.ಎಂ. ವಕೀಲರಿಂದಃ**

ಸಾಕ್ಷಿಯು ತಮಿಳುನಾಡು ರಾಜ್ಯದವರಾಗಿದ್ದು, ಅವರಿಗೆ ಕನ್ನಡ ಬಾರದೆ ಇರುವ ಕಾರಣ ಶ್ರೀ ಬಾಲಾಜಿ ಪ್ರಸಾದ್ ರವರನ್ನು ತರ್ಜುಮೆದಾರರಾಗಿ ಪ್ರತಿವಾದಿಗಳ ಪರ ವಕೀಲರು ನೇಮಕ ಮಾಡಿಕೊಂಡಿರುತ್ತಾರೆ.

ಈರೋಡ್ ಜಿಲ್ಲೆ, ಗೋಬಿಚೆಟ್ಟಿವಾಡಿ ತಾಲ್ಲೂಕು, ನಲ್ಲಗೌಂಡನಪಾಳ್ಯ ಗ್ರಾಮದಲ್ಲಿ ವಾಸವಿರುತ್ತೇನೆ. ನಾನು ಟಿ.ನರಸೀಪುರ ತಾಲ್ಲೂಕಿನ ಹ್ಯಾಕನೂರು ಗ್ರಾಮದಲ್ಲಿ 12 ವರ್ಷದಿಂದ ವಾಸವಿರುತ್ತೇನೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಬಳಿ ದಾಖಲೆಗಳು ಇರುತ್ತವೆ. ಅವುಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಟಿ.ನರಸೀಪುರ ತಾಲ್ಲೂಕಿನ ಹ್ಯಾಕನೂರು ಗ್ರಾಮದಲ್ಲಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ. ತಮಿಳುನಾಡಿನ ನಮ್ಮ ಮನೆಯಿಂದ ಹ್ಯಾಕನೂರು ಗ್ರಾಮಕ್ಕೆ ಸುಮಾರು 130 ಕಿ.ಮೀ ದೂರ ಇರುತ್ತದೆ. ಹ್ಯಾಕನೂರು ಗ್ರಾಮದಲ್ಲಿ ಪುರುಷೋತ್ತಮ ಮತ್ತು ಇತರರು ಪರಿಚಯ ಇರುತ್ತಾರೆ. ನಾನು ತಮಿಳುನಾಡಿನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ಅಲ್ಲಿ ನನಗೆ 5 ಎಕರೆ ಜಮೀನು ಇರುತ್ತದೆ. ಸದರಿ ಸ್ವತ್ತಿನಲ್ಲಿ ನಾನೇ ವ್ಯವಸಾಯ ಮಾಡುತ್ತಿದ್ದೇನೆ. ಸದರಿ ಸ್ವತ್ತಿನ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ವ್ಯವಸಾಯ ಮಾಡುವುದಿಲ್ಲ ಎಂದರೆ ಸರಿಯಲ್ಲ.

ಸ್ವತ್ತನ್ನು ಖರೀದಿ ಮಾಡುವಾಗ ಅದರ ಮೂಲ ದಾಖಲೆಯನ್ನು ಪರಿಶೀಲನೆ ಮಾಡಬೇಕು ಎಂದರೆ ಸರಿ. ವಾದಿಯ ಮಗ ಸೋಮಣ್ಣ, ಮರಿಸ್ವಾಮಿ ಮತ್ತು ಪುಟ್ಟನಂಜಮ್ಮ ನನಗೆ ಗೊತ್ತಿಲ್ಲ. ಭೀಮಯ್ಯನ ಮಗ ಮಾದಯ್ಯ ನನಗೆ ಗೊತ್ತಿರುವುದಿಲ್ಲ. ಸದರಿಯವರು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕನ್ನಡ ಬರೆಯಲು ಮತ್ತು ಓದಲು ನನಗೆ ಬರುವುದಿಲ್ಲ. ನಾನು ದ್ವಿತೀಯ ಪಿ.ಯು.ಸಿ.ಯವರೆಗೆ ಓದಿರುತ್ತೇನೆ.

ಸರ್ವೆ ನಂ.151ರಲ್ಲಿ ಒಟ್ಟು ವಿಸ್ತೀರ್ಣ 1 ಎಕರೆ 13 ಗುಂಟೆ ಇರುತ್ತದೆ. 1941ರ ಆರ್.ಟಿ.ಸಿ.ಯನ್ನು ಬಸಪ್ಪ ಹಾಗೂ ಅವರ ಮಗನ ಹೆಸರಿನಲ್ಲಿರುವುದನ್ನು ನೋಡಿ ಖರೀದಿ ಮಾಡಿರುತ್ತೇನೆ. ಬಸಪ್ಪನವರಿಗೂ ಬರುವ ಮೊದಲು ಸರ್ಕಾರಕ್ಕೆ ಸೇರಿತ್ತು. ಸದರಿ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸ್ವತ್ತನ್ನು ಖರೀದಿ ಮಾಡುವ ಮೊದಲು ವಕೀಲರ ಅಭಿಪ್ರಾಯವನ್ನು 2011ರಲ್ಲಿ ಪಡೆದಿರುತ್ತೇನೆ. ಬರವಣಿಗೆಯ ರೂಪದಲ್ಲಿ ಅಭಿಪ್ರಾಯವನ್ನು ಪಡೆದಿರುವುದಿಲ್ಲ. ಸ್ವತ್ತನ್ನು ಖರೀದಿ ಮಾಡುವ ಸಂಬಂಧ ಸಾರ್ವಜನಿಕ ನೋಟಿಸ್ ನ್ನು ನೀಡಿರುವುದಿಲ್ಲ. ಖರೀದಿ ಮಾಡುವ ಮೊದಲು ಸ್ವತ್ತಿಗೆ ಹೋಗಿ ನಾನು ಪರಿಶೀಲನೆ ಮಾಡಿರುತ್ತೇನೆ. ದಾವಾ ಸ್ವತ್ತನ್ನು ಖರೀದಿ ಮಾಡುವ ಮೊದಲೆ ಪಕ್ಕದಲ್ಲಿರುವ ಜಮೀನನ್ನು ಖರೀದಿ ಮಾಡಿರುತ್ತೇನೆ. ಹ್ಯಾಕನೂರು ಗ್ರಾಮದಲ್ಲಿ ಸುಮಾರು 10 ಎಕರೆ ಜಮೀನನ್ನು ಖರೀದಿ ಮಾಡಿರುತ್ತೇನೆ. 1920 ರಿಂದ 2011 ರವರೆಗೆ ನಾನು ಋಣಭಾರ ಪ್ರಮಾಣ ಪತ್ರವನ್ನು ಪರಿಶೀಲನೆ ಮಾಡಿರುತ್ತೇನೆ. ಇ.ಸಿ.ಪ್ರಕಾರ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ.

ದಿನಾಂಕ.03.03.1922 ರಂದು ವಾದಿಯು ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.4 ರಲ್ಲಿ ಮಾದನ ಮಗ ಮಾದ ಹಾಗೂ ಕ್ರಯ ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಬಸಪ್ಪ ನವರ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಬದಲಾವಣೆ ಆಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬಸಪ್ಪನವರ ಹೆಸರಿಗೆ ಖಾತೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಿ.ಡಿ.1 ಕನ್ನಡದಲ್ಲಿ ಇದ್ದು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿ.ಡಿ.1 ರಲ್ಲಿ ಸರ್ವೆ ನಂ.150 ರಲ್ಲಿ 5 ಎಕರೆ ನಮೂದು ಇರುವುದು ನಾನು ನೋಡಿರುವುದಿಲ್ಲ. ನಿ.ಡಿ.1ನ್ನು ಈ ದಾವೆಗಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.1ರಲ್ಲಿ ಒಟ್ಟು 4 ಪೋಡು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು 2011 ನೇ ಸಾಲಿನ ಮೊದಲೆ ತೀರಿಕೊಂಡಿದ್ದರು ಎಂದರೆ ಸರಿಯಲ್ಲ.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**